## ಶಿಕ್ಷಕ- -ಪೋಷಕರ ಮಧ್ಯೆ..

ಇದು ಶಿಕ್ಷಕಿಯ ದೂರು: ‘ಆ ಹುಡುಗ ಎಲ್ಲರೆದುರಿಗೆ ನನ್ನನ್ನು ತರಗತಿಯಲ್ಲಿ ಟೀಕಿಸುತ್ತಿದ್ದ. ಹಾಗಾಗಿ ಆತನ ತಂದೆ -ತಾಯಿಗಳನ್ನು ಕರೆಸಿ ಅವರ ಮಗನ ನಡವಳಿಕೆಯ ಬಗೆಗೆ ಹೇಳಿದೆವು. ಆತನಿಗೆ ಬುದ್ಧಿ ಹೇಳುವ ಬದಲು ಅವರು ಹೇಳಿದ್ದೇನು ಗೊತ್ತೆ? – ಏನೋ ಮಕ್ಕಳು ಮಾಡ್ತಾರೆ, ಬಿಡಿ, ಇದಕ್ಕೆಲ್ಲಾ ನಮ್ಮನ್ನು ಕರೆಸೋದಾ! ನಾವು ಏನೋ ಓದಿನ ವಿಷಯ ಇರಬೇಕು ಎಂದುಕೊಂಡೆವು’– ಅಂತ! ಮುಂದೆ ಆ ಹುಡುಗ ಸುಧಾರಣೆ ಆಗಲೇ ಇಲ್ಲ.

ಪೋಷಕರು ಗಮನಿಸಬೇಕಾದ ಹಲವು ಅಂಶಗಳಿವೆ:

★ ಶಿಕ್ಷಕರನ್ನು ಎಂದೂ ಮಕ್ಕಳೆದುರಿಗೆ ಟೀಕಿಸಬಾರದು.

★ ಶಿಕ್ಷಕರು ಮಕ್ಕಳಿಗೆ ಕಲಿಸಬೇಕಾದರೆ, ಅವರಿಗೆ ಪೂರ್ಣ ಸ್ವಾತಂತ್ರ್ಯದ ಅಗತ್ಯವಿದೆ.

★ ಶಾಲೆಗೆ ಲಕ್ಷಗಟ್ಟಲೆ ಫೀಸು ತುಂಬುತ್ತೇವೆ ಎಂದ ಮಾತ್ರಕ್ಕೆ ನಮ್ಮ ಮಕ್ಕಳು ಏನು ಬೇಕಾದರೂ ಮಾಡಬಹುದು, ಶಿಕ್ಷಕರನ್ನು ಕೊಂಡುಕೊಂಡಿದ್ದೇವೆ ಎಂಬ ಧೋರಣೆಯಿಂದ ದೂರವಿರಿ.

★ ಗುರು–-ಶಿಷ್ಯ ಸಂಬಂಧ ಕೇವಲ ಭಾವನಾತ್ಮಕವಾದದ್ದಲ್ಲ. ಸಾರ್ವಕಾಲಿಕವಾಗಿ, ಸಾರ್ವತ್ರಿಕವಾಗಿ ಅದರ ಪ್ರಯೋಜನ ಗುರುವಿಗಿಂತ ಶಿಷ್ಯನಿಗೇ ಹೆಚ್ಚು. ಅಪ್ಪ-– ಅಮ್ಮ ಶಿಕ್ಷಕರನ್ನು ಗೌರವಿಸಿದರೆ ಮಾತ್ರ, ಮಕ್ಕಳಿಗೆ ಅವರ ಮೇಲೆ ಪ್ರೀತಿ, -ಗೌರವ ಬೆಳೆಯಲು ಸಾಧ್ಯ.

ಶಿಕ್ಷಕರೊಂದಿಗೆ ಘರ್ಷಣೆಯಾಗಬಹುದಾದ ಹಲವು ಸಂದರ್ಭಗಳು ಮಕ್ಕಳ ಶಾಲಾಜೀವನದಲ್ಲಿ ಎದುರಾಗಬಹುದು. ಅವುಗಳನ್ನು ಜಾಣ್ಮೆಯಿಂದ ನಿಭಾಯಿಸಿ. ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳಿ. ಮಕ್ಕಳ ಹಿತವನ್ನು ಮನದಲ್ಲಿರಿಸಿಕೊಳ್ಳಿ.



* ಶಿಕ್ಷಕರು ಮತ್ತು ಪೋಷಕರ ಜತೆಗೆ ಮಕ್ಕಳ ಭಿನ್ನಾಭಿಪ್ರಾಯಗಳು

ಈ ಎಲ್ಲ ಕಾರಣಗಳೂ ಸದಾ ಇರುತ್ತವೆ ಎಂದಲ್ಲ. ಅದರ ಅವಧಿ ಬದಲಾಗುತ್ತಾ ಇರುತ್ತದೆ. ತಕ್ಷಣದ ಸಮಸ್ಯೆಯಿಂದ ದೀರ್ಘಕಾಲದ ತೊಂದರೆಗಳಾಗಿ ಬದಲಾಗಲೂಬಹುದು. ಇಂಥ ಸಂದರ್ಭಗಳಲ್ಲಿ ಮಕ್ಕಳು ಅಸುರಕ್ಷತೆಯ ಅಪಾಯಕ್ಕೆ ಒಳಗಾಗುತ್ತಾರೆ.

ಈ ರೀತಿಯ ಸಮಸ್ಯೆಗಳನ್ನು ಎದುರಿಸಲು ಕೆಲವೊಂದು ಸೂತ್ರಗಳನ್ನು ಅನುಸರಿಸಬಹುದು. ಈ ಸೂತ್ರಗಳನ್ನು ಕೇವಲ ಪೋಷಕರಷ್ಟೇ ಅಲ್ಲದೆ ಶಿಕ್ಷಕರೂ ವೈಯಕ್ತಿಕವಾಗಿ, ಶಾಲಾ ಮಟ್ಟದಲ್ಲಿ ಪಾಲಿಸುವ ಪ್ರಯತ್ನ ಮಾಡುವುದು ಮಕ್ಕಳ ಶಾಲಾ ಜೀವನವನ್ನು ಹೆಚ್ಚು ಸುಖಮಯವಾಗಿಸುತ್ತದೆ.

